ಓ.ಎಸ್. – 81/2020

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 09.04.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ.ಹೆಚ್.ಎಸ್ ರವರಿಂದ**

**1.** ನನ್ನ ಅಜ್ಜ ಗುತ್ಯಪ್ಪನಿಗೆ ಒಟ್ಟು ನನ್ನ ತಂದೆ ಸೇರಿ ಒಟ್ಟು 5 ಜನ ಗಂಡು ಮಕ್ಕಳು. ಮೂರು ಜನ ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳ ಪೈಕಿ ಇಬ್ಬರು ಈಗಾಗಲೇ ಮೃತ ಪಟ್ಟಿದ್ದಾರೆ. ಗಂಡು ಮಕ್ಕಳ ಪೈಕಿ 3 ಜನ ಮೃತ ಪಟ್ಟಿದ್ದಾರೆ. ಅವರೆಂದರೆ ನನ್ನ ತಂದೆ ಮತ್ತು ಅವರ ಅಣ್ಣಂದಿರು. 2017 ರಲ್ಲಿ ನನ್ನ ತಂದೆ ಮೃತ ಪಟ್ಟರು. 2017 ರವರೆಗೆ ನನ್ನ ತಂದೆ ಮತ್ತು ಅವರ ಸಹೋದರ ಮತ್ತು ಸಹೋದರಿಯರು ಒಟ್ಟು ಕುಟುಂಬದ ಸದಸ್ಯರಾಗಿ ಒಟ್ಟಿಗೆ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಚಿಕ್ಕ ವಯಸ್ಸಿನಲ್ಲಿಯೇ ಸರ್ಕಾರಿ ನೌಕರಿಗೆ ಸೇರಿಕೊಂಡಿದ್ದ, ಯಾವ ವರ್ಷ ಎಂದು ನಿಖರವಾಗಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ, ಬೆಳ್ಳಣ್ಣೆ ಇವರಿಗೆ ಸೇರಿದ್ದು ಎಂದರೆ ಸರಿ. ಸದರಿ ದಾವಾ ಸ್ವತ್ತನ್ನು ಕುಟುಂಬದ ಎಲ್ಲಾ ಸದಸ್ಯರು ಗೇಣಿ ಸಾಗುವಳಿ ಮಾಡುತ್ತಿದ್ದ ಕಾರಣ ಕುಟುಂಬದ ಪರವಾಗಿ ದಾವಾ ಸ್ವತ್ತಿನ ಮಂಜೂರಾತಿ ಕೋರಿ ಅರ್ಜಿಯನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಗೇಣಿ ಅರ್ಜಿ ಹಾಗೂ ಮಂಜೂರಾತಿ ಆದೇಶದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**2.** ದಾವಾ ಸ್ವತ್ತಿನ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ ನಮ್ಮ ಕುಟುಂಬಕ್ಕೆ ಸ್ವಂತ ಆಸ್ತಿಗಳು ಇದ್ದವು. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತೇನೆ. ನಮ್ಮ ಕುಟುಂಬದ ಸ್ವಂತ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂಬದಲ್ಲಿ ವಿಭಾಗ ಆಗಿತ್ತು. ಸದರಿ ನಮ್ಮ ಕುಟುಂಬಕ್ಕೆ ಇದ್ದ ಜಮೀನಿನ ಸರ್ವೇ ನಂಬರ್ 125. ಅದರಲ್ಲಿ 2 ಎಕರೆ ಸ್ವತ್ತು ನನ್ನ ಅಜ್ಜಿಯ ಹೆಸರಿಗೆ ಇತ್ತು. ಆ ಸ್ವತ್ತನ್ನು ನನ್ನ ಚಿಕ್ಕಪ್ಪ ಮೂರ್ತಿ ಯಾನೆ ಎನ್ ಜಿ ಕೃಷ್ಣಮೂರ್ತಿ ಅಂದರೆ ಈ ದಾವೆಯ 1 ನೇ ಪ್ರತಿವಾದಿಯ ಹೆಸರಿಗೆ ನೀಡಲಾಗಿದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ.

**3.** ನನ್ನ ತಂದೆ ದಾವಾ ಸ್ವತ್ತಿನ ಮಂಜೂರಾತಿಗಾಗಿ ಗೇಣಿ ಅರ್ಜಿಯನ್ನು ಕೊಟ್ಟಾಗ ಆ ಅರ್ಜಿಯ ಮೇಲೆ ಏನೇನು ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಮತ್ತು 2 ನೇ ಪ್ರತಿವಾದಿ

ತಲಾ 1 ಎಕರೆ 26 ಗುಂಟೆಯಂತೆ ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿ ಇದ್ದು, ಈಗ ನನ್ನ ತಂದೆ ಹಿಸ್ಸೆಗೆ ಬಂದ ಜಮೀನನ್ನು ಬೇರೆಯವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಹಿಸ್ಸೆಗೆ ಬಂದ 1 ಎಕರೆ 26 ಗುಂಟೆ ಕ್ಷೇತ್ರವನ್ನು ಯಾವತ್ತೂ ಪ್ರತ್ಯೇಕವಾಗಿ ಸಾಗುವಳಿ ಮಾಡಿಲ್ಲ. ನನ್ನ ತಂದೆ ಸಾಗುವಳಿ ಮಾಡುವಾಗ ಮಟ್ಟಳಗ ಎಂಬ ತಳಿಯ ಭತ್ತವನ್ನು ಬೆಳೆದಿದ್ದರು. ನಾಗರಾಜ ಬಿನ್ ಎನ್.ಜಿ ಕೃಷ್ಣಪ್ಪ ರವರು ಯಾವ ತಳಿಯ ಭತ್ತವನ್ನು ಬೆಳೆಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.